


International Journal of Kannada Research
www.kannadajournal.com

**ISSN: 2454–5813**
IJKR 2023; 9(4): 21-24
© 2023 IJKR
www.kannadajournal.com
Received: 25-06-2023
Accepted: 30-07-2023

**ಜಿ. ಎಂ. ಹೇಮಲತ**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

**ಡಾ. ಹೆಚ್. ವಿಶ್ವನಾಥ್**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

**Corresponding Author:**
**ಜಿ. ಎಂ. ಹೇಮಲತ**
ಡಾ. ಎಂ.ಚಿದಾನಂದಮೂರ್ತಿ ಕನ್ನಡ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ, ಕರ್ನಾಟಕ, ಭಾರತ

# ಐತಿಹಾಸಿಕ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಕೊಡವರ ಪ್ರದರ್ಶನ ಕಲೆಗಳು

**ಜಿ. ಎಂ. ಹೇಮಲತ, ಡಾ. ಹೆಚ್. ವಿಶ್ವನಾಥ್**

**DOI:** https://doi.org/10.22271/24545813.2023.v9.i4a.893

**ಪೀಠಿಕೆ**

ಕರ್ನಾಟಕದ ಕೊಡಗು ಜಿಲ್ಲೆ ತನ್ನದೇ ಆದ ಸಾಂಸ್ಕೃತಿಕ ವಿಶಿಷ್ಟತೆಗೆ ಹೆಸರುವಾಸಿಯಾಗಿದೆ. ಈ ಜಿಲ್ಲೆಯು ಪ್ರಾಕೃತಿಕ ಸೌಂದರ್ಯದಿಂದ ಕೂಡಿದ್ದು, ಜನಾಂಗಿಕ, ಭಾಷಿಕ ಹಾಗೂ ಸಾಂಸ್ಕೃತಿಕ ವೈವಿದ್ಯತೆಯಿಂದ ಆಕರ್ಷಣೀಯವಾಗಿದೆ. ಕೊಡವರು ಇಲ್ಲಿನ ಪ್ರಮುಖ ಮೂಲ ನಿವಾಸಿಗಳು. ತಮ್ಮದೇ ಆದ ಭಾಷೆ, ಆಹಾರ, ಸಂಗೀತ, ನೃತ್ಯ ಮತ್ತು ಆಚರಣೆಗಳನ್ನು ಹೊಂದಿರುವ ಈ ಜನರು ಇಂದಿಗೂ ತನ್ನ ಮೂಲ ಸ್ವರೂಪ ಹಾಗೂ ಸೊಗಡನ್ನು ಉಳಿಸಿಕೊಂಡು ಬಂದಿದ್ದಾರೆ.

ಮಾನವ ತನ್ನ ಸಂತೋಷ, ದು:ಖಗಳನ್ನು ಅಭಿವ್ಯಕ್ತ ಪಡಿಸಲು ಪ್ರಾರಂಭಿಸಿದಾಗಿನಿಂದ ಕಲೆಯ ಉಗಮವಾಯಿತು ಎಂದು ಹೇಳಬಹುದು. ತನಗೆ ತೋಚಿದಂತೆ, ನೋಡುಗರಿಗೆ ಸುಲಭವಾಗಿ ಅರ್ಥವಾಗುವಂತೆ, ಅವರ ಅಭಿರುಚಿಗೆ ತಕ್ಕಂತೆ ತನ್ನ ಭಾವನೆಗಳನ್ನು ಪ್ರದರ್ಶಿಸಲು ಪ್ರಾರಂಭಿಸಿ ಮನುಷ್ಯ ಅನೇಕ ಬಗೆಯ ಕಲೆಗಳನ್ನು ಸೃಷ್ಟಿಸಿದನು. ಈ ಕಲೆಗಳ ಮೂಲವೇ ಪ್ರೇಕ್ಷಕ. ಪ್ರೇಕ್ಷಕನನ್ನು ಉಲ್ಲಾಸಗೊಳ್ಳುವಂತೆ ಮಾಡಲು ಹಲವಾರು ಬಗೆಯ ವೈವಿದ್ಯ ಪೂರ್ಣವಾದ ಕಲೆಗಳ ಸೃಷ್ಟಿ ಬಹಳ ಹಿಂದಿನಿಂದಲೂ ಆಗಿದೆ. ಅದರಲ್ಲಿ ಈ ಪ್ರದರ್ಶನ ಕಲೆಗಳು ಪ್ರದೇಶದಿಂದ ಪ್ರದೇಶಕ್ಕೆ, ಜನಾಂಗದಿಂದ ಜನಾಂಗಕ್ಕೆ ಭಿನ್ನವಾಗಿರುವುದನ್ನು ಕಾಣಬಹುದಾಗಿದೆ.

ಜೀವನವೇ ಒಂದು ಪ್ರದರ್ಶನ ಕಲೆ. ಪ್ರತಿಯೊಂದು ಕಲೆಯು ಪ್ರಕೃತಿ ಪುರುಷರ ಆರಾಧನೆಯ ಮೂಲವಾಗಿ ದೈವೀಗುಣವನ್ನು ಹೊಂದಿ ಅದರ ಆರಾಧನೆಗಾಗಿಯೇ ಪ್ರದರ್ಶನಗೊಳ್ಳುತ್ತದೆ. ಈ ಪ್ರದರ್ಶನವು ಜೀವಿಯ ಸ್ವಭಾವ, ಆಸಕ್ತಿಗಳು ಮತ್ತು ಮೌಲ್ಯಗಳನ್ನು ಪ್ರತಿಬಿಂಬಿಸುತ್ತದೆ. ಪ್ರಕೃತಿ ಎಂಬುದು ಪ್ರತಿಯೊಂದು ಜೀವಿಯ ಆರಾಧನೆಯ ಮೂಲವಾಗಿದೆ. ನಾವು ಪ್ರಕೃತಿಯಿಂದಲೇ ಬಂದಿದ್ದು, ನಮ್ಮ ಜೀವನವನ್ನು ನಡೆಸಲು ಪ್ರಕೃತಿಯ ಮೇಲೆ ಅವಲಂಬಿತರಾಗಿದ್ದೇವೆ. ಪ್ರಕೃತಿಯನ್ನು ಆರಾಧಿಸಲು ನಾವು ವಿವಿಧ ರೀತಿಯ ಕಲೆಗಳನ್ನು ಬಳಸುತ್ತೇವೆ. ಜೀವನದ ನಾಲ್ಕು ಅವಾಸ್ಥೆಗಳಾದ ಹುಟ್ಟು, ಹಸಿವು, ಬಯಕೆ ಮತ್ತು ಸಾವು ಎಂಬ ಈ ನಾಲ್ಕು ಅವಾಸ್ಥೆಗಳು ಪ್ರತಿಯೊಂದು ಜೀವಿಯ ಜೀವನದ ಒಂದು ಭಾಗವಾಗಿದೆ. ಹುಟ್ಟು ಎಂಬುದು ಜೀವನದ ಆರಂಭ, ಹಸಿವು ಎಂಬುದು ಜೀವನದ ಅವಶ್ಯಕತೆ, ಬಯಕೆ ಎಂಬುದು ಜೀವನದ ಮೋಜು ಮತ್ತು ಸಾವು ಎಂಬುದು ಜೀವನದ ಅಂತ್ಯ. ಸೂರ್ಯನು ಹುಟ್ಟು ಮತ್ತು ಬೆಳವಣಿಗೆಯ ಸಂಕೇತವಾಗಿದೆ. ಭೂಮಿಯು ಹಸಿವು ಮತ್ತು ಬಯಕೆಯ ಸಂಕೇತವಾಗಿದೆ. ಹಾಗಾಗಿಯೇ ಎಲ್ಲಾ ಪ್ರದರ್ಶನ ಕಲೆಗಳ ಮೂಲ ಹೊಸ ಹುಟ್ಟನ್ನು ಕೊಡುವವಳು ಭೂತಾಯಿಯೇ ಆಗಿದ್ದಾಳೆ. ಜೀವೋತ್ಪತ್ತಿ, ಫಲವೋತ್ಪತ್ತಿ ಫಲವತ್ತತೆ ಸಮೃದ್ಧ ಅಭಿವೃದ್ಧಿ ಇವುಗಳ ಉದ್ದೇಶಕ್ಕಾಗಿಯೇ ಪ್ರತಿಯೊಂದು ಪ್ರದರ್ಶನ ಕಲೆಯು ಪ್ರದರ್ಶನಗೊಳ್ಳುತ್ತದೆ. ಅವೆಲ್ಲವೂ ಜೀವನಾವರ್ತದ ಹುಟ್ಟು–ಮುಂಜಿ, ಮದುವೆ, ಹಬ್ಬ ಹರಿದಿನಗಳಲ್ಲಿ ಇಂದಿಗೂ ಪ್ರದರ್ಶನಗೊಳ್ಳುತ್ತಿವೆ.

ಕಲಾತ್ಮಕವೂ, ವೈವಿಧ್ಯಮಯವೂ, ವಿಶಾಲವೂ ಆದ ಕಲೆಗಳನ್ನು ನಿರ್ದಿಷ್ಟವಾದ ಚೌಕಟ್ಟಿನೊಳಗೆ ಹಿಡಿದಿಡಲು ಸಾಧ್ಯವಾಗುವುದಿಲ್ಲ. ಕಲೆಯೆನ್ನುವುದು ಆಯಾಯ ಸಮುದಾಯದ ಜನರ ಸಂಸ್ಕೃತಿಯನ್ನು ಒಳಗೊಂಡಿದ್ದು, ಅವರ ಅಂತರಂಗವನ್ನು ವ್ಯಕ್ತಪಡಿಸುವಂಥದ್ದಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ಮನುಷ್ಯರು ಭಾಷೆಯನ್ನು ಬಳಸಲು ಅಥವಾ ಕಲಿಯುವ ಮೊದಲು ತಮ್ಮ ಭಾವನೆಗಳನ್ನು ಮತ್ತು ಅನುಭವಗಳನ್ನು ಅಭಿನಯದ ಮೂಲಕ ವ್ಯಕ್ತಪಡಿಸುತ್ತಿದ್ದರು. ಈ ಅಭಿನಯಗಳು ಸಾಮಾನ್ಯವಾಗಿ ಸಾಂಕೇತಿಕವಾಗಿರುತ್ತಿದ್ದವು. ನಂತರದ ದಿನಗಳಲ್ಲಿ ಇವು ಕ್ರಮೇಣ ಕುಣಿತಗಳು ಮತ್ತು ಆಟಗಳಾಗಿ

ಬೆಳೆದವು. ಮನುಷ್ಯ ತಮ್ಮ ಜೀವನದಲ್ಲಿ ಆನಂದ ಮತ್ತು ನೆಮ್ಮದಿಯನ್ನು ಕಂಡುಕೊಳ್ಳಲು ಕಲೆಯನ್ನು ಬಳಸಿದ. ಪೂಜೆಯನ್ನು ಮಾಡುವಾಗ ಹಾಡಿ ಕುಣಿಯಲು ಪ್ರಾರಂಭಿಸಿದ. ಆ ಮೂಲಕ ತನ್ನ ಅಂತರಂಗದ ಆಯಾಸವನ್ನು ಕಳೆಯಲು ತನ್ನದೇ ಆದ ದಾರಿ ಕಂಡುಕೊಂಡ.

ಕೊಡವರು ಕಲೆಗಳಲ್ಲಿ ಶೌರ್ಯ, ಸಾಹಸ, ವೀರತ್ವವನ್ನು ಕಾಣುತ್ತಿದ್ದಾರೆ. ಅವರ ಜನಪದ ಕಲೆಗಳಿಗೆ ಅಲ್ಲಿಯ ನಿಸರ್ಗವೇ ಪ್ರಾದೇಶಿಕ ನೆಲೆಯಾಗಿದೆ. ಕೊಡವರಲ್ಲಿ ಕಂಡು ಬರುವ ಹೆಚ್ಚಿನ ಜನಪದ ಕಲೆಗಳು ಪುರುಷ ಪ್ರಧಾನವಾದವು ಮತ್ತು ವೀರರಸ ಪ್ರಧಾನವಾದವು. ಬೇಟೆಯ ಸಾಹಸದಿಂದ ಹಿಡಿದು ವ್ಯವಸಾಯ, ದಿನನಿತ್ಯ ಚಟುವಟಿಕೆಗಳ ಸುತ್ತ ಜನಪದ ಕಲೆಗಳು ಹುಟ್ಟಿ ಬೆಳೆದಿವೆ. ಕೊಡವರ ಪ್ರದರ್ಶನಾತ್ಮಕ ಕಲೆಗಳು ಪ್ರಕೃತಿಯ ಪರಿಸರದಲ್ಲಿ ಉಗಮವಾಗಿ ಕುಲದೇವತೆಗಳನ್ನು ನಂಬಿ ಆಚರಿಸಿ, ಆರಾಧಿಸುವ ಸಂಪ್ರದಾಯವನ್ನು ಹೊಂದಿರುತ್ತವೆ. ಅವರ ಪ್ರಮುಖ ಕಲೆಗಳನ್ನು ಧಾರ್ಮಿಕ ಕಲೆ, ಮನರಂಜನ ಕಲೆ, ವೀರಪ್ರಧಾನ ಕಲೆಗಳೆಂದು ವಿಂಗಡಿಸಿ ವಿಶ್ಲೇಷಿಸಲಾಗಿದೆ.

**ಧಾರ್ಮಿಕ ಕಲೆ**

೧. **ಕೊಂಬಾಟ್:** ಕೊಡಗು ಜಿಲ್ಲೆಯಲ್ಲಿ ಕಂಡುಬರುವ ವೈವಿಧ್ಯಮಯ ಜನಪದ ಕಲೆಗಳಲ್ಲಿ **'ಕೊಂಬಾಟ್'** ವಿಶಿಷ್ಟವಾದ ನರ್ತನ ಪ್ರಕಾರ. ದೇವತಾರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದಿರುವ ಈ ಕುಣಿತವನ್ನು ಹಬ್ಬ ಹುಣ್ಣಿಮೆಗಳಲ್ಲಿ, ಜಾತ್ರೆ ಉತ್ಸವಗಳಲ್ಲಿ ಪ್ರದರ್ಶಿಸುತ್ತಾರೆ. ಕೊಡಗಿನ ಸಾಂಪ್ರದಾಯಿಕ ವೇಶಭೂಷಣಗಳನ್ನು ಧರಿಸಿದ ಕಲಾವಿದರು ಕೈಯಲ್ಲಿ ಜಿಂಕೆಯ ಕೊಂಬುಗಳನ್ನು ಹಿಡಿದು ಇಲ್ಲವೇ ತಲೆಯ ಮೇಲೆ ಸಾರಂಗದ ಕೊಂಬುಗಳನ್ನು ಕಟ್ಟಿಕೊಂಡು ಅಥವಾ ಕೈಯಲ್ಲಿ ನವಿಲುಗರಿ ತೆಂಡೆಗಳನ್ನು ಹಿಡಿದು ಕುಣಿಯುತ್ತಾರೆ. ಕುಣಿತದಲ್ಲಿ ಇಷ್ಟೇ ಜನ ಕಲಾವಿದರಿರಬೇಕೆಂಬ ನಿಯಮವೇನಿಲ್ಲ. ಕಲಾವಿದರು ಎರಡು ಸಾಲುಗಳಲ್ಲಿ ಪರಸ್ಪರ ಅಭಿಮುಖವಾಗಿ ನಿಂತು ಸುತ್ತು ಸಾಲಿನಲ್ಲಿ ಕುಣಿಯುತ್ತಾರೆ. ಭಸ್ಮಾಸುರನನ್ನು ಸಂಹಾರ ಮಾಡಲು ವಿಷ್ಣು ಅವತಾರ ಎತ್ತಿದಾಗ ಒಂದು ಬಾರಿ ಕೊಂಬನ್ನು ಹಿಡಿದು ಮತ್ತೊಂದು ಬಾರಿ ಪೀಲಿಯನ್ನು ಹಿಡಿದು ನರ್ತನ ಮಾಡಿದನು. ಅದರ ಪ್ರತಿರೂಪವಾಗಿ ಕೊಂಬಾಟ್ ಕುಣಿತವನ್ನು ಪ್ರದರ್ಶಿಸಲಾಗುವುದೆಂದು ಕೊಡವರು ನಂಬುತ್ತಾರೆ. ಮೊಣಕಾಲನ್ನು ತಗ್ಗಿಸಿ, ನೆಗೆಯುತ್ತಾ, ಕೈಗಳಿಂದ ಕೊಂಬುಗಳನ್ನು ಹಿಡಿದು ನರ್ತಿಸುವ ಈ ಕಲೆ ರೋಮಾಂಚನಕಾರಿಯಾಗಿದ್ದು, ನವೆಂಬರ್ ಇಪ್ಪತ್ತ ನಾಲ್ಕರಿಂದ ಪ್ರಾರಂಭವಾಗಿ ಡಿಸೆಂಬರ್ ಹದಿನಾಲ್ಕರವರೆಗೆ ಈ ಪ್ರದರ್ಶನವಿರುತ್ತದೆ. ನಾಡು, ಕೇರಿ ಮತ್ತು ಊರುಗಳಲ್ಲಿ ನೆಲೆನಿಂತ ದೈವಗಳ ಆರಾಧನೆಯಲ್ಲಿ ಕೊಂಬಾಟ್‌ವನ್ನು ಪ್ರದರ್ಶಿಸುತ್ತಾರೆ. ಈ ಹಬ್ಬದ ಪ್ರಾರಂಭದ ದಿನದಿಂದ ಮುಕ್ತಾಯ ಆಗುವವರೆಗೂ ಮದ್ಯ ಮತ್ತು ಮಾಂಸ ಸೇವನೆದ ನಿಷಿದ್ಧ. ಹಗಲಿನಲ್ಲಿ ಪ್ರದರ್ಶಿಸಲ್ಪಡುವ ಈ ಕಲೆಗೆ ದುಡಿ, ಡೋಲು, ಕೊಂಬು, ಪರೆ, ತಾಳ ವಾದ್ಯಗಳು ಹಿಮ್ಮೇಳದ ವಾದ್ಯಗಳು.

೧. **ಪೀಲಿಯಾಟ್:** ಕೊಡವ ಭಾಷೆಯಲ್ಲಿ ಪೀಲಿ ಎಂದರೆ ನವಿಲುಗರಿ ಕಂತೆ. ನವಿಲುಗರಿಗಳನ್ನು ಬೆನ್ನ ಮೇಲೆ ಕಟ್ಟಿಕೊಂಡು ದುಡಿ, ಡೋಲು, ಕೊಂಬು, ಪರೆ, ತಾಳ, ವಾದ್ಯಗಳ ಸಂಗೀತಕ್ಕೆ ಅನುಗುಣವಾಗಿ ನಡೆಸುವ ಕುಣಿತಕ್ಕೆ ಪೀಲಿಯಾಟ್ ಎಂದು ಕರೆಯುತ್ತಾರೆ. ನವಿಲಿನಂತೆ ಅತ್ಯಾಕರ್ಷಕವಾಗಿ ಕುಣಿಯುವ ಈ ಮನಮೋಹಕ ನೃತ್ಯವು ದೇವತಾರಾಧನೆಯ ಅಂಗವಾಗಿ ಬೆಳೆದು ಬಂದಿದೆ. ಕಲಾವಿದರು ಕೊಡವರ ರೀತಿಯಲ್ಲಿ ಬಿಳಿಕುಪ್ಪಸವನ್ನು ನಡುವಿನವರೆಗೆ ತೊಟ್ಟು, ರೇಷ್ಮೆ ದಟ್ಟಿಯನ್ನು ಸುತ್ತಿ, ತಲೆಗೆ ಜರಿ ರುಮಾಲನ್ನು ಧರಿಸಿ ಸುಮಾರು ಒಂದು ಒಂದೂವರೆ ಅಡಿಯಷ್ಟು ಅಂತರದಲ್ಲಿ ಸುತ್ತುವರಿದು ಈ ನೃತ್ಯವನ್ನು ಪ್ರದರ್ಶಿಸುತ್ತಾರೆ. ಸಾಮಾನ್ಯವಾಗಿ ದೇವಾಲಯಗಳ ಬಳಿ ಪ್ರದರ್ಶಿಸುವ ಈ ಕುಣಿತದಲ್ಲಿ ಕಲಾವಿದರು ದೇವಾಲಯದ ಪ್ರಾಕಾರದ ಸುತ್ತಲೂ ನವಿಲಿನಂತೆ ಕುಪ್ಪಳಿಸುತ್ತಾ, ಕೇಕೆ ಹಾಕುತ್ತಾ, ಡೋಲಿನ ಸದ್ದಿಗನುಗುಣವಾಗಿ ಎರಡೂ ತೋಳುಗಳನ್ನೆತ್ತಿ ಕೈಗಳನ್ನು ಬಾಗಿಸುತ್ತಾ ಬಗ್ಗಿ ಎದ್ದು ಹಿಂದೆ ತಿರುಗುತ್ತಾ ಕುಣಿಯುವ ರೀತಿಯು ಅತ್ಯಂತ ಆಕರ್ಷಿಣೀಯವಾದುದು.

೧. ೩ **ಬೊಳಕಾಟ್:** ಕೊಡವ ಭಾಷೆಯಲ್ಲಿ ಬೋಳಕ್ ಎಂದರೆ ಬೆಳಕು (ದೀಪ) ಎಂದರ್ಥ. ಪರಶಿವನು ಭಸ್ಮಾಸುರನನ್ನು ಸಂಹಾರ ಮಾಡಿದ ನಂತರ ವೀರಾವೇಶದಲ್ಲಿ ೩೨ ಬಗೆಯ ನೃತ್ಯ ಪ್ರಕಾರಗಳನ್ನು ಪ್ರದರ್ಶಿಸಿದನಂತೆ. ಅದರ ಪ್ರತಿರೂಪವಾದ ಬೊಳುಕಾಟವು ಸಹ ಒಂದು ಬಗೆಯ ನೃತ್ಯ ಸಮುಚ್ಚಯ. ಬೆಳಕಿನ ಸುತ್ತ ವೈವಿಧ್ಯಮಯವಾದ ರೀತಿಯಲ್ಲಿ ಕೊಡವ ಗಂಡಸರು ಸುಮಾರು ೧೭ ಬಗೆಯ ನೃತ್ಯ ಭಂಗಿಗಳಲ್ಲಿ ಕುಣಿತ ನಡೆಸುತ್ತಾರೆ. ಬೊಳಕಾಟವು ಕೊಡವರ ಆಧ್ಯಾತ್ಮಿಕ ಸಾಂಸ್ಕೃತಿಕ ನಂಬಿಕೆಗಳನ್ನು ಪ್ರತಿನಿಧಿಸುತ್ತದೆ. ಸುಮಾರು ೧೫ ರಿಂದ ೨೦ ಮಂದಿ ಪಾಲ್ಗೊಳ್ಳುವ ಈ ನೃತ್ಯದಲ್ಲಿ ತಮ್ಮ ಸಾಂಪ್ರದಾಯಿಕ ವೇಷಭೂಷಣಗಳಾದ ಬಿಳಿಯ ಅಂಗಿ, ಅದರ ಮೇಲೊಂದು ಕರಿಯ ನಿಲುವಂಗಿ, ತಲೆಗೆ ಬಿಳಿಯ ರುಮಾಲು, ಸೊಂಟಕ್ಕೆ ರೇಷ್ಮೆ ಪಟ್ಟಿ ಕಟ್ಟಿ ಪೀಚೆಕತ್ತಿ ಸಿಕ್ಕಿಸಿಕೊಂಡು ಎಡಗೈಯಲ್ಲಿ ಚಾಮರ, ಬಲಗೈಯಲ್ಲಿ ಬಿಚ್ಚುಗತ್ತಿ ಹಿಡಿದು ಎಣ್ಣೆ ದೀಪದ ಸುತ್ತ ವರ್ತುಲಾಕಾರವಾಗಿ ನಿಲ್ಲುತ್ತಾರೆ. ಹಾಡುವವರು ಒಂದು ಪ್ರಶಸ್ತ ವೇದಿಕೆಯಲ್ಲಿ ನಿಂತು ತಮ್ಮ ಸಾಂಪ್ರದಾಯಿಕ ದುಡಿ ವಾದ್ಯ ಬಾರಿಸುತ್ತಾ ಹಾಡುತ್ತಾರೆ. ತಂಡದ ನಾಯಕನು ಹಾಡಿನೊಂದಿಗೆ ಕುಣಿತ ಆರಂಭಿಸಿದಾಗ ಎಲ್ಲರೂ ಚಾಮರಗಳನ್ನು ಬೀಸುತ್ತಾ ಕುಣಿಯುತ್ತಾರೆ.

೧. ೪ **ಉಮ್ಮತಾಟ್:** ಉಮ್ಮತಾಟ್ ಕುಣಿತದ ಹಿನ್ನೆಲೆಯಲ್ಲಿ ಸಮುದ್ರ ಮಥನದ ಕಥೆ ಇದೆ. ಸಮುದ್ರ ಮಥನ ಕಾಲದಲ್ಲಿ ಉದ್ಭವಿಸಿದ ಅಮೃತವನ್ನು ರಾಕ್ಷಸರಿಗೆ ದಕ್ಕದಂತೆ ಮಾಡಲು ಮೋಹಿನಿ ರೂಪ ತಾಳಿದ ವಿಷ್ಣು ತನ್ನ ನಾನಾ ರೀತಿಯ ಹಾವಭಾವಗಳಿಂದ ಅಸುರನನ್ನು ಬೆರಗುಗೊಳಿಸಿ ಸುರರಿಗೆ ಅಮೃತವನ್ನು ಹಂಚಿದ ಸಂಕೇತವೇ ಉಮ್ಮತ್ತಾಟ್ ಎಂದು ಕೊಡವರ ನಂಬಿಕೆ. ಹೆಣ್ಣುಮಕ್ಕಳು ಕೆಂಪು ಜರಿ ಸೀರೆಯನ್ನು ಕೊಡವ ಪದ್ಧತಿಯಂತೆ ಉಟ್ಟು ಚಿನ್ನದ ಜೋಮಾಲೆಯನ್ನು ಧರಿಸಿ ಹಣೆಗೆ ಕುಂಕುಮವಿಟ್ಟು, ಕೆಂಪು ವಸ್ತ್ರ ತಲೆಗೆ ಕಟ್ಟಿ ಕಂಚಿನ ತಾಳಗಳನ್ನು ಹಿಡಿದು, ಬಳೆಯ ಝೇಂಕಾರಕ್ಕೆ ತಾಳದ ಶಬ್ದದ ಹೊಂದಾಣಿಕೆಯೊಂದಿಗೆ ವೃತ್ತಾಕಾರದಲ್ಲಿ ಗೆಜ್ಜೆಯ ನಾದದೊಡನೆ ಮಧ್ಯದಲ್ಲಿ ಹಚ್ಚಿಟ್ಟ ದೀಪದ ಸುತ್ತ ಹೆಜ್ಜೆ ಇಡುತ್ತಾ ಹಾಡಿಕೊಂಡು ಕುಣಿಯುತ್ತಾರೆ. ಉಮ್ಮತಾಟ್ ಏಳು ಬಗೆಯ ಕುಣಿತದ ಪ್ರಕಾರಗಳನ್ನು ಒಳಗೊಂಡಿದ್ದು, ಹಾಡುಗಳಲ್ಲಿಯೂ ಸಹ ಕೇವಲ ಕಾವೇರಿ ಮಾತೆಯ ಸ್ತುತಿಯಷ್ಟೇ ಅಲ್ಲದೆ, ಕೊಡಗಿನ ಜನತೆ, ಸುಂದರ ಪರಿಸರ, ಕೊಡವರ ಅತಿಥಿ ಸತ್ಕಾರ ಇವೇ ಮೊದಲಾದವುಗಳನ್ನು ಒಳಗೊಂಡಿರುತ್ತದೆ

**೨ ಮನರಂಜನಾ ಕಲೆ**

**೨. ೧ ಹುತ್ತರಿ ಕುಣಿತ:** ಪುತ್ತರಿ ಅಥವಾ ಹುತ್ತರಿ ಕೊಡವರ ದೊಡ್ಡ ಹಬ್ಬ. ಬತ್ತದ ಕೊಯಿಲನ್ನು ಕಟಾವು ಮಾಡುವ ಸುಗ್ಗಿಗೆ ಕೊಡವರು ಹುತ್ತರಿ ಎಂದು ಕರೆಯುತ್ತಾರೆ. ಹಬ್ಬಕ್ಕೆ ನಾಲ್ಕೈದು ದಿನಗಳ ಮೊದಲು ಗ್ರಾಮದ ಯುವಕರು, ಹಿರಿಯರು ಕೋಲಾಟದ

ಅಭ್ಯಾಸವನ್ನು ನಡೆಸಿ ಹಬ್ಬದ ದಿನ ಊರಮುಂದೆ ಸಾಂಪ್ರದಾಯಿಕ ವೇಷಧರಿಸಿ ಕೊಡವರು ಹಾಡುತ್ತಾ ಕೋಲು ಹುಯ್ಯುತ್ತಾ ಕುಣಿಯುತ್ತಾರೆ. ಹುತ್ತರಿ ಕೋಲಾಟದಲ್ಲಿ ಜಪ್ಪಕೋಲು, ಚಂದ ತೊರಕೋಲು, ಪಾತುರೆಕೋಲು, ಪಾತುರಕೋಲು ಹೀಗೆ ನಾನಾ ಬಗೆಗಳಿವೆ.

**೨. ವಾಲಗತ್ತಾಟ್:** ಮನರಂಜನೆಯೇ ಪ್ರಧಾನವಾಗಿರುವ ಕೊಡವರು ಅತಿ ಸಂತೋಷದ ಸಮಯದಲ್ಲಿ ಪುರುಷರು ವಾಲಗದ ಜೊತೆ ಹೆಜ್ಜೆಯಿಟ್ಟು ಕುಣಿಯುವುದನ್ನು ವಾಲಗತ್ತಾಟ್ ಎನ್ನುತ್ತಾರೆ. ಇದು ಹೆಚ್ಚಾಗಿ ಹಬ್ಬಹರಿದಿನ, ವಿವಾಹ, ಸಾರ್ವಜನಿಕ ಸಭೆ ಹಾಗೂ ಸಂತೋಷ ಕೂಟಗಳಲ್ಲಿ ಉತ್ಸಾಹ, ಉಲ್ಲಾಸಗಳ ಸಂಕೇತವಾಗಿ ನಡೆಯುತ್ತದೆ. ಹಿಂದೆ ರಾಜ ಮಹಾರಾಜರುಗಳ ನಡುವೆ ಯುದ್ಧಗಳು ಜರುಗುತ್ತಿದ್ದ ಸಂದರ್ಭಗಳಲ್ಲಿ ಜಯಶೀಲರಾದವರು ಊಟೋಪಚಾರ ನಡೆಸಿ ವಾಲಗಗಳೊಂದಿಗೆ ಕುಣಿದು ವಿಜಯೋತ್ಸವವನ್ನು ಆಚರಿಸುತ್ತಿದ್ದರಂತೆ. ಈ ಕುಣಿತಕ್ಕೆ ಹಿನ್ನೆಲೆಯಾಗಿ ವಾಲಗ, ಮೋರಿ, ಡೋಲು, ತಾಳ, ಪರೆ, ಕೊಂಬು ಮುಂತಾದ ವಾದ್ಯಗಳನ್ನು ಬಳಸುತ್ತಾ ಪುರುಷರು ಕೈಯಲ್ಲಿ ಪೀಚೆಕತ್ತಿ, ಒಡಿಕತ್ತಿಗಳನ್ನು ಹಿಡಿದು ಕುಣಿಯುತ್ತಾರೆ.

**೨. ಜೋಯಿಪಾಟ್:** ಕೊಡವ ಭಾಷೆಯಲ್ಲಿ ಜೋಯಿಪಾಟ್ ಎಂದರೆ ಜ್ಯೋತಿಷ್ಯದ ಹಾಡು. ಈ ಕುಣಿತವು ಭೂತ–ವರ್ತಮಾನ–ಭವಿಷ್ಯದ ಸಂಗತಿಗಳನ್ನು ಅಭಿವ್ಯಕ್ತಿಸುವ ವಿಶಿಷ್ಟ ಕಲಾ ಪ್ರಕಾರ. ಹುತ್ತರಿಯ ಅನಂತರ ಹತ್ತು–ಹದಿನೈದು ಜನ ಎರಡೂ ಕೈಗಳಲ್ಲೂ ಬಿಚ್ಚುಗತ್ತಿಗಳನ್ನು ಹಿಡಿದು ವೈವಿಧ್ಯಮಯವಾಗಿ ತಿರುಗಿಸುತ್ತಾ ಹಿಮ್ಮೇಳದ ಡೋಲಿನ ತಾಳಕ್ಕೆ ಅನುಸಾರವಾಗಿ ನೃತ್ಯ ಮಾಡುತ್ತಾರೆ. ಒಬ್ಬ ಹೆಣ್ಣು ವೇಷ ಧರಿಸಿದರೆ, ಮೊತ್ತೊಬ್ಬ ಬಿಳಿಯ ಕುಪ್ಪಸ ತೊಟ್ಟು ಒಂದು ಕೈಯಲ್ಲಿ ಬೆತ್ತ ಮತ್ತೊಂದು ಕೈಯಲ್ಲಿ ಪರಿಯ ಹಿಡಿದ ಕುರುಡನ ವೇಷ, ಇನ್ನೊಬ್ಬ ಮೈಗೆ ಚಿಂದಿ ಬಟ್ಟೆಗಳನ್ನು ಉಟ್ಟು, ಬಾಲ ಕಟ್ಟಿಕೊಂಡ ಮಂಗನ ವೇಷ, ಮರದ ಕತ್ತಿಯನ್ನು ಕೈಯಲ್ಲಿ ಹಿಡಿದ ಕೊರಮನ ವೇಷ, ಬಾಳೆಯ ತರಗುಗಳನ್ನು ಧರಿಸಿ ಕೊಕ್ಕರೆಗಳಂತೆ ವೇಷ ಹಾಕುವವರು ಹೀಗೆ ವೈವಿಧ್ಯಮಯ ವೇಷಧಾರಿಗಳಿರುತ್ತಾರೆ. ಇವರೆಲ್ಲರೂ ಪರೆ ಇಲ್ಲವೆ ಮೇದರ ಡೋಲು, ಜಾಗಟೆಯಾಕಾರದ ಕಂಚಿನ ತಟ್ಟೆ, ದುಡಿ ವಾದ್ಯಗಳ ಹಿಮ್ಮೇಳದ ಗುತ್ತಿಗೆ ತಕ್ಕಂತೆ ಕುಣಿಯುತ್ತಾರೆ.

**೩. ವೀರಪ್ರಧಾನ ಕಲೆ**

**೩. ಜಮ್ಮ ಕೊಡವರ ನೃತ್ಯ:** ಕೊಡಗಿನ ಹುತ್ತರಿ ಹಬ್ಬದ ಅನಂತರದ ದಿನಗಳಲ್ಲಿ ಪ್ರದರ್ಶನಗೊಳ್ಳುವ ಈ ನೃತ್ಯವನ್ನು ಸುಮಾರು ಹತ್ತು ಹದಿನೈದು ಮಂದಿ ಕಲಾವಿದರು ತಮ್ಮ ಸಾಂಪ್ರದಾಯಿಕ ವೇಷಭೂಷಣಗಳನ್ನು ಧರಿಸಿ ಕೈಗಳಲ್ಲಿ ಬಿಚ್ಚುಗತ್ತಿ ಹಿಡಿದು ಕತ್ತಿಗಳನ್ನು ಬೀಸುತ್ತಾ ವೈವಿಧ್ಯಮಯವಾಗಿ ತಿರುಗಿಸುತ್ತಾ ಹಿಮ್ಮೇಳದ ಡೋಲಿನ ತಾಳಕ್ಕೆ ಅನುಸಾರವಾಗಿ ಕುಣಿಯುತ್ತಾರೆ. ಇದೊಂದು ಪ್ರಾಚೀನ ಯುದ್ಧ ನೃತ್ಯವಾಗಿದೆ. ಈ ಕುಣಿತದಲ್ಲಿ ಆರು ಬಗೆಯ ಹೆಜ್ಜೆಗಳಿದ್ದು, ಜಮ್ಮ ಕೊಡವರು ಈ ಕುಣಿತವನ್ನು ಸಾಂಪ್ರದಾಯವನ್ನಾಗಿ ಬೆಳೆಸಿಕೊಂಡು ಬಂದಿದ್ದಾರೆ.

**೩. ಪರೆಯಕಳಿ:** ವರ್ಷಕ್ಕೊಂದು ಬಾರಿ ಊರ ಮಧ್ಯದಲ್ಲಿ ಯುದ್ಧದ ಸಂಕೇತವಾಗಿ ಪ್ರದರ್ಶಿಸುವ ಈ 'ಪರೆಯಕಳಿ' ಕೊಡಗಿನ ವೀರಪ್ರಧಾನ ಕಲೆಯಾಗಿದೆ. ಕಲಾವಿದರು ಪರಿಯ ಮತ್ತು ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಹೊಡೆದಾಡುವುದೇ ಪರೆಯಕಳಿ. ಎರಡೂ ಕೈಗಳಲ್ಲೂ ಐದಾರು ಅಡಿಗಳ ಬೆತ್ತವನ್ನು ಹಿಡಿದು ಒಂದನ್ನು ಹೊಡೆಯಲು ಮತ್ತೊಂದನ್ನು ಎದುರಾಳಿಯ ಹೊಡೆತವನ್ನು ತಡೆಯಲು ಬಳಸುತ್ತಾರೆ. ಇದು ಸಮೂಹ ನೃತ್ಯವಾಗಿದ್ದು, ಕುಣಿತವು ನಿಲ್ಲತಕ್ಕದೆಂದು ಗೊತ್ತಾದಾಗ ಮೇದ 'ಪರ' ಹೊಡೆಯುತ್ತಾನೆ. ಪರಯಕಳಿಯಲ್ಲಿ ಸಮೂಹವು ಭಾಗವಹಿಸಿದರೆ, ತಟ್ಟೆ ಪರಿಯಕಳಿಯಲ್ಲಿ ಏಕಕಾಲಕ್ಕೆ ಇಬ್ಬರು ಮಾತ್ರ ಭಾಗವಹಿಸುತ್ತಾರೆ. ಹೊಡೆತವನ್ನು ತಡೆಯಲು ಕೋಲಿನ ಬದಲು ಬಿದಿರಿನ ಗುರಾಣಿಯಾಕಾರದ ತಟ್ಟೆಯನ್ನು ಮತ್ತು ಸುಮಾರು ಆರು ಅಡಿ ಉದ್ದದ ಬೆತ್ತದ ಕೋಲನ್ನು ಬಳಸುತ್ತಾರೆ. ಎಡಗೈಯಲ್ಲಿ ತಟ್ಟೆ, ಬಲಗೈಯಲ್ಲಿ ಕೋಲು ಹಿಡಿದ ಯುವಕ ಮೈದಾನಕ್ಕಿಳಿದು ತನ್ನ ಸಮವಯಸ್ಕರನ್ನು ದ್ವಂದ್ವಯುದ್ಧಕ್ಕೆ ಕರೆಯುತ್ತಾನೆ. "ನಾ ಬಾಳ್, ನೀಬಾಳ್, ಏಡಕೊದೆ ಇಳಿವ ಚಂಜ್ಞಾದಿ ಬಾಳ್, ಇಗ್ಗುತಪ್ಪ ಬಾಳ್, ಬಯತೂರಪ್ಪ ಬಾಳ್, ಬಾಳ್ ಬಾಳಿರೆ ಬಾಳ್ (ನಾನು ಬಾಳುತ್ತೇನೆ, ನೀನೂ ಬಾಳು, ನನ್ನೊಡನೆ ಕಣಕ್ಕಿಳಿದ ಸ್ನೇಹಿತರೂ ಬಾಳಲಿ, ಇಗ್ಗುತಪ್ಪ ಬೈತೂರಪ್ಪ ದೇವರುಗಳೂ ಬಾಳಲಿ, ಎಲ್ಲರೂ ಬಾಳಲಿ) ಎಂದು ಹಾಡುತ್ತಾ ವೀರ ನೃತ್ಯ ಮಾಡುತ್ತಾ ಕರೆಯುತ್ತಾನೆ. ಹೀಗೆ ಕರೆದ ಯುವಕನ ಜತೆ ಸೆಣಸಾಡಲು ಕಣಕ್ಕೆ ಇಳಿಯುವವನೂ ಸಹ ಅದೇ ರೀತಿ ಹಾಡುತ್ತಾ ಕಾದಡಲು ಪ್ರಾರಂಭಿಸುತ್ತಾರೆ. ಕೆಲವೊಮ್ಮೆ ಈ ವರಸೆ ಭೀಕರರೂಪ ಪಡೆಯುವುದುಂಟು, ಇಂತಹ ಸಂದರ್ಭದಲ್ಲಿ ಪ್ರೇಕ್ಷಕರು ಮಧ್ಯ ಪ್ರವೇಶಿಸಿ ಇಬ್ಬರನ್ನೂ ಸಮಾಧಾನಪಡಿಸುತ್ತಾರೆ. ಈ ವರಸೆಯ ಕೊನೆಯಲ್ಲಿ ಎದುರಾಳಿಗಳಿಬ್ಬರೂ ಪರಸ್ಪರ ಆಲಂಗಿಸಿಕೊಂಡು ಕುಣಿದು ಮುಕ್ತಾಯ ಮಾಡುತ್ತಾರೆ.

**೩. ನರಿಮಂಗಲ:** ವೀರ, ಸಾಹಸ ಮತ್ತು ಧೈರ್ಯದ ಅಂಶಗಳನ್ನೊಳಗೊಂಡ 'ನರಿಮಂಗಲ'ವನ್ನು ಹುಲಿ ಕೊಂದ ವೀರನಿಗೆ ಮಾಡುತ್ತಾರೆ. ಈತನಿಗೆ ಮದುಮಗನಂತೆ ಕೊಡವರ ಕನ್ನಿಮಂಗಲದ ಸಂಪ್ರದಾಯದ ಉಡುಗೆಗಳನ್ನು ತೊಡಿಸಿ ಊರಿನಲ್ಲಿ ವಾದ್ಯದ ಸಮೇತ ಮೆರವಣಿಗೆ ಮಾಡಿ ಬಂದೂಕನ್ನು ಹಿಡಿಸಿ, ಬಂದೂಕಿಗೆ ಕೆಂಪು ರೇಷ್ಮೆ ವಸ್ತ್ರವನ್ನು ಹೊದಿಸಿ ಹೆಣ್ಣಿನ ಬದಲಿಗೆ ಸತ್ತ ಹುಲಿಯ ರೂಪವನ್ನು ವೀರನ ಪಕ್ಕದಲ್ಲಿರಿಸಿ ಧಾರೆಯನ್ನು ಎರೆಯುತ್ತಾರೆ. ಮದುಮಗನು ವೀರತ್ವದಿಂದ 'ನಾಡುಮಂದ್'ನಲ್ಲಿ ಸಂತೋಷದಿಂದ ಸಾಂಪ್ರದಾಯಿಕ ಕುಣಿತದಲ್ಲಿ ಭಾಗವಹಿಸುತ್ತಾರೆ. ಅಂದಿನಿಂದ ಆತನಿಗೆ ಹುಲಿ ಕೊಂದ ವೀರನೆಂದು ಬಿರುದು ನೀಡಲಾಗುತ್ತದೆ.

ಹೀಗೆ ಪ್ರದರ್ಶನ ಕಲೆಗಳನ್ನು ಸಮಗ್ರ ಜಾನಪದದ ಒಂದು ಪ್ರಮುಖ ಅಂಗವಾಗಿ ಪರಿಗಣಿಸಲಾಗುತ್ತದೆ. ಅವುಗಳಲ್ಲಿ ಹಾಡು, ಕುಣಿತ, ಅಭಿನಯ, ಹಾವಭಾವ, ವಿಲಾಸಗಳು ಇರುವುದರಿಂದ ಇವು ಪ್ರದರ್ಶಕ ಕಲೆಗಳೆನಿಸಿವೆ. ಪರಂಪರಾನುಗತವಾಗಿ ಒಂದು ಸಂಸ್ಕೃತಿಯಲ್ಲಿ ಯಾವುದೇ ಪ್ರೌಢ ವಿದ್ಯೆಯ ಸಂಪರ್ಕವಿಲ್ಲದೆ, ಶಾಸ್ತ್ರದ ಆಧಾರವಿಲ್ಲದೆ ಪ್ರಯೋಗದಿಂದ ಬೆಳೆದು ಬಂದಿರುವುದರಿಂದ ಇವು ಪ್ರದರ್ಶನ ಕಲೆಗಳೆನಿಸಿವೆ.

**ಪರಾಮರ್ಶನ ಗ್ರಂಥಗಳು**

೧. ಮುಲ್ಲೆಂಗಡ ರೇವತಿ ಪೂವಯ್ಯ, ಕೊಡವ ಜನಪದ ನೃತ್ಯಗಳು ಒಂದು ಅಧ್ಯಯನ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ, ಮಡಿಕೇರಿ

೨. ಡಾ. ಚಕ್ಕೆರೆ ಶಿವಶಂಕರ್, ಕೊಡವ ಕಲೆಗಳು, ಕರ್ನಾಟಕ ಜಾನಪದ ಪರಿಷತ್ತು, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–೫೬೦೫೪

೩. ನಾಗೇಶ್ ಕಾಲೂರು, ಕೊಡವ ಭಾಷಿಕ ಜನಾಂಗಗಳ ಸಾಂಸ್ಕೃತಿಕ ಬದುಕು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಮಡಿಕೇರಿ

೪. ನಾಗರಾಜ್ ಎಂ. ಜಿ, ಕೊಡಗಿನ ಸಾಂಸ್ಕೃತಿಕ ಜಾನಪದ ಕಲೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫. ರಾಮಾನುಜಂ ಪಿ. ಎಸ್, ಕೊಡವರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು